(ಶ್ರೀ ಟಿ. ಸುಬ್ರಹ್ಮಣ್ಯ)

ನಮ್ಮ ಉದ್ದೇಶ. ಈ ಉದ್ದೇಶವನ್ನು ತೋರಿಸುವುದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳುತ್ತೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ಮುಕ್ಕಣ್ಣಪ್ಪನವರು ನನಗೆ ಬಹಳ ಸ್ನೇಹಿತರು. ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳಿ ಎಂದು ಹೇಳುತ್ತಿದ್ದಾರೆ. ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳಬೇಕಾದದ್ದು ಅಂಥವರು. ನಾನು ಹೃದಯ ಬಿಚ್ಚಿ ಹೇಳುತ್ತೇನೆ; ಮನಸ್ಸು ಬಿಚ್ಚಿ ಮಾತನಾಡುತ್ತೇನೆ. ಮನಸ್ಸು ಬಿಚ್ಚಿ ಮಾತನಾಡುತ್ತಿದ್ದೇನೆಂದು ಮೊದಲಿನಿಂದಲೂ ನಾನು ಹೇಳುತ್ತಿದ್ದೇನೆ. ನಮಗೂ ನಿಮಗೂ ವ್ಯತ್ಯಾಸವಿಲ್ಲ. ಆದಷ್ಟು ಜಾಗ್ರತೆ ಈ ಶಾಸನವನ್ನು ಜಾರಿಗೆ ಕೊಡೋಣ.

ನಿನ್ನೆಯ ದಿವಸ ಒಂದು ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದಿತು. ಸರ್ಕಾರದವರು ಈ ಸಂಸ್ಥೆಗಳಿಗೆ ಕೊಡುವ ರೆವಿನ್ಯುವನ್ನು 20 ಪರ್ಸೆಂಟಿನಿಂದ 30 ಪರ್ಸೆಂಟಿಗೆ ಮಾಡಲು ಎಂದು. ಸಾಧ್ಯವಾದಷ್ಟು ವಿಮರ್ಶೆಮಾಡಿ ಮಾಡೋಣ.

Sri C. J. MUCKANNAPPA.—How is it relevant ?

Sri T. SUBRAMANYA.—Because a question was raised by an Hon ble Member sitting on the other side. I am bound to satisfy him.

Sri C. J. MUCKANNAPPA.—If you want to create the same trouble which is prevailing there.

ಶ್ರೀ ಟಿ. ಸುಬ್ರಹ್ಮಣ್ಯ.—ಇದಕ್ಕೆ ಸಂಬಂಧವಿಲ್ಲದ ಮಾತನ್ನು ಆಡಬೇಡಿ. There is nothing like relevancy. ರೆಲವೆನ್ಸಿ ಇಲ್ಲದೆ ಮಾತನಾಡುವವರಿಗೆ ಹೇಳಿ ಕೊಡುವುದಕ್ಕೆ ಸಾಧ್ಯವೇ ! ಅದು ಸಾಧ್ಯವಾಗುವುದಿಲ್ಲ. ವಿದ್ಯಾಶಾಲೆಯಲ್ಲಿ ಪಾಠ ಹೇಳಿಕೊಡುವುದಕ್ಕೆ ಸಾಧ್ಯ.

ಶ್ರೀ ಜೆ. ಬಿ. ಮುರ್ಲಾರಾಧ್ಯ (ನಂಜನಗೂಡು).—ಬನವೇಶ್ವರರು ಯಾರ ಡೊಂಕನ್ನೊ ತಿದ್ದುವುದಕ್ಕೆ ಹೋಗಬೇಡಿ ಎಂದು ಹೇಳಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯ.—ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಬೇರೆಯವರ ಡೊಂಕನ್ನು ಅಡುವುದಕ್ಕೆ ಹೋಗುವುದಿಲ್ಲ. ನಮ್ಮ ಡೊಂಕನ್ನು ನಾವು ತಿದ್ದಿಕೊಂಡರೆ ಸಾಕು. ನಮಗೆ ನಮ್ಮಲ್ಲಿರುವ ಡೊಂಕು ಕಾಣುತ್ತದೆ; ನಮ್ಮಲ್ಲಿರುವ ಗುಣ ಕಾಣುತ್ತಾ ಇರುತ್ತದೆ. ಧ್ಯೇಯವನ್ನು ಅವಲಂಬಿಸಿರುವವರು ಡೊಂಕನ್ನು ನೋಡುವುದಿಲ್ಲ ಎಂದು ಹೇಳುತ್ತೇನೆ. ನಿಮ್ಮಲ್ಲಿರುವ ಡೊಂಕು ನನಗೆ ಗೊತ್ತಿಲ್ಲ. ನಿಮ್ಮ ಡೊಂಕು ನಮ್ಮ ಕಣ್ಣಿಗೆ ಬೀಳುವುದಿಲ್ಲ. ಸಂಬಂಧಪಟ್ಟ ವಿಷಯ ಮಾತನಾಡೋಣ. ಅಷ್ಟು ಮಾತ್ರ ಹೇಳುತ್ತೇನೆ.

ಈ ಬಿಲ್ಲನ್ನ ಅಂಗೀಕಾರಮಾಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

Mr. DEPUTY SPEAKER.—The question is :

"That the Madras District Boards (Mysore Amendment) Bill, 1959, be taken into consideration."

The motion was adopted.

Mr. DEPUTY SPEAKER.—There is an amendment by Sri V. Srinivasa Setty to clause 2 of the Bill.

Sri V. SRINIVAS SHETTY.—I do not propose to move the amendment, Sir.

Mr. DEPUTY SPEAKER.—The question is :

"That Clauses 1 and 2, the Title and the Preamble stand part of the Bill."

The motion was adopted.

Clauses 1 and 2, the Title and the Preamble were added to the Bill.

Motion to pass.

Sri T. SUBRAMANYA.—Sir, I beg to move that the Bill be passed.

Mr. DEPUTY SPEAKER.—The question is :

"That the Madras District Boards (Mysore Amendment) Bill 1959, be passed."

The motion was adopted.

Mr. DEPUTY SPEAKER.—The House now rises and will meet after half-an-hour.

The House adjourned for Lunch at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair.]

BOMBAY LOCAL BOARDS (MYSORE AMENDMENT) BILL, 1959.

Motion to consider.

Sri T. SUBRAMANYA (Minister for Law, Labour and Local Self-Government).—Sir, I beg to move :

"That the Bombay Local Boards (Mysore Amendment) Bill, 1959, be taken into consideration."

Mr. DEPUTY SPEAKER.—Motion moved:

"That the Bombay Local Boards (Mysore Amendment) Bill, 1959 be taken into consideration."

Sri T. SUBRAMANYA.—For the same reasons which I put forward applying this case also, and I move that the Bill may be taken into consideration.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಈಗ ನಡೆದಿರುವ ಮದ್ರಾಸ್ ಲೋಕಲ್ ಬಾಡೀಸ್ ಎಕ್ಸ್‌ಟೆನ್‌ಷನ್ನಿಗೆ ಏನು ಕಾರಣಗಳನ್ನು ಕೊಟ್ಟರೋ ಅವೇ ಕಾರಣಗಳಮೇಲೆ ಈ ಬಿಲ್ಲನ್ನೂ ಅಂಗೀಕರಿಸಬೇಕೆಂದು ಹೇಳಿ, ಆ ಕಾರಣಗಳನ್ನು ರಿಪೀಟ್ ಮಾಡಬೇಕಾಗಿಲ್ಲ ವೆಂದು ಹೇಳಿದರು. ಅವರು ಕಾರಣಗಳನ್ನು ಹೇಳಿ, ಸಮಾಧಾನವಾಗಿ ಉತ್ತರ ಕೊಟ್ಟುಬಿಟ್ಟಿದ್ದರೆ ನಾನು ಮಾತನಾಡಲೇ ಬೇಕಾಗಿರಲಿಲ್ಲ. ಪಬ್ಲಿಕ್ ಪ್ಲಾಟ್ ಫಾರಂಮೇಲೆ ಮಾತನಾಡುವ ಹಾಗೆ ಒಂದು ಅಜ್ಜಿ ಇತ್ತು, ಯಮಾಲಯಕ್ಕೆ ಹೋದರು, ಮುಂತಾದು ದನ್ನು ಹೇಳಿಬಿಟ್ಟರು. ಯಾವ ಕಾರಣಕ್ಕೋಸ್ಕರ ಈ ಬಿಲ್ಲಿಗೆ ಒಪ್ಪಿಗೆ ಕೊಡಬೇಕೆಂದು ಸಮಂಜಸವಾಗಿ ಹೇಳಿದರೆ, ನಾವು ಒಪ್ಪಲೇಬೇಕು. ರಿಪಿಟಿಷನ್ ಆಗುತ್ತದೆ ಎಂದು ಹೇಳಲಿಲ್ಲವೇನೋ. ಸರ್ಕಾರಕ್ಕೆ ನಾವು ಏನು ಭಾಷೆ ಉಪಯೋಗಿಸಿ ಹೇಳಬೇಕೋ, ಇದಕ್ಕಾಗಿ ಯಾವ ಲಿಪಿಯಲ್ಲಿ ಬರೆದ ಪುಸ್ತಕಗಳನ್ನು ಓದಬೇಕೋ, ಯಾವ ಕಾರಣವಾದ ಪುಸ್ತಕಗಳನ್ನು ಉಪಯೋಗಿಸಬೇಕೋ ಗೊತ್ತಿಲ್ಲ. ಚುನಾವಣೆ ನಡೆಸಬೇಕೆಂದರೆ ನಡೆಸಿ; ಇಲ್ಲದಿದ್ದರೆ ನಿಮ್ಮ ಕೈಯಲ್ಲಿ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ ವೆಂದು ಹೇಳಬೇಡಿ. ನೀವು ರಿಪೀಟ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ, ನಾವು ಹೇಳಿದ್ದೇ ಹೇಳೋ ಕೆಸಬಾಯಿದಾಸ ಎನ್ನುವಂತೆ ಹೇಳಿದ್ದೇ ಹೇಳಬೇಕಾಗುತ್ತದೆ. ನಮ್ಮ ಸ್ನೇಹಿತರಾದ ಶ್ರೀ ನರಸಿಂಹ ರವರು ಹೇಳಿದಹಾಗೆ ಡಿಸ್ಟ್ರಿಕ್ಟ್ ಕೌನ್ಸಿಲ್ಲುಗಳು ಬರುವುದಕ್ಕೆ ಮುಂಚೆ, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಏಕೆ ಹೀಗೆ ಜೀವದಾನ ಕೇಳುತ್ತಿದ್ದೀರಿ. ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧವೋ ಈ ಅಮೆಂಡ್‌ಮೆಂಟ್ ಬಿಲ್ಲಿಗೂ, ಮುಂದೆ ಬರತಕ್ಕಂಥ ಡಿಸ್ಟ್ರಿಕ್ಟ್ ಕೌನ್ಸಿಲ್ಲಿಗೂ ಅಷ್ಟೇ ಸಂಬಂಧವಿದೆ. ಯಾವ ಆಧಾರದಮೇಲೆ ಈ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೀರಾ? ನೀವು ಬಹಳ ಬುದ್ಧಿವಂತರು, ನಿಮಗೆ ಏಸ್‌ಡಮ್ ಇದೆಯೆಂದು ಹೇಳುತ್ತೀರಾ? ಮುಂದೆ ಬರತಕ್ಕಂಥ ಕೌನ್ಸಿಲ್ಲಿನಲ್ಲಿ, ಲೆಜಿಸ್ಲೇಟರುಗಳು, ಎಂ.ಪಿ.ಗಳು, ತಾಲ್ಲೂಕು ಬೋರ್ಡು ಮೆಂಬರುಗಳು, ಪ್ಯೂರ್ಲಿ ಎಲೆಕ್ಟೆಡ್ ಮೆಂಬರುಗಳು ಇರುತ್ತಾರೆ. ಈವಾಗ ಪ್ಯೂರಲಿ ನಾಮಿನೇಟೆಡ್ ಮೆಂಬರ್ಸ್ ಇದ್ದು, ಡೆಪ್ಯುಟಿ ಕಮೀಷನ್ನರು ಬೋರ್ಡಿನ ಚೇರ್ಮನ್ನರಾಗಿರುತ್ತಾರೆ. ಏಕೆ ಹೀಗೆ ಅಜಿಬಿಜಿ ಮಾಡುತ್ತೀರಾ? ಮದ್ರಾಸು ಮತ್ತು ಬೊಂಬಾಯಿ ಲೋಕಲ್ ಬೋರ್ಡುಗಳ ಬಿಲ್ಲುಗಳು ಒಂದೇ ಆಗಿವೆ. ಎರಡನ್ನೂ ಒಟ್ಟಿಗೆ ಮಾತಾಡಬಹುದಾಗಿತ್ತು. ಏನು ಹೇಳಿದರೂ ಹೌಣಕ್ಕೆ ಮ್ಯೆಗುದ್ದಿ ಮ್ಯೆನೋಯಿಸಿಕೊಂಡ ಹಾಗೆಯೇ. ಚುನಾವಣೆಗಳನ್ನು ಶೀಘ್ರವಾಗಿ ಮಾಡಿ. ಮಾಡುವುದಕ್ಕೆ ಮನಸ್ಸು ಇದೆಯೇ? ಜೀವದಾನದ ಕೆಲಸ ಬೇಡ. ಚುನಾವಣೆಗಳನ್ನು ನಡೆಸಿ ಎಂದು ಸರ್ಕಾರಕ್ಕೆ ನಾನು ಒತ್ತಿ ಹೇಳುತ್ತೇನೆ.

Sri T. SUBRAMANYA.—There is no reply necessary. I commend the Bill for the consideration of this House.

Mr. DEPUTY SPEAKER.—The question is:

"That the Bombay Local Boards (Mysore Amendment) Bill, 1959, be taken into consideration."

The motion was adopted.

Mr. DEPUTY SPEAKER.—Clauses 2, 3 and 4. The question is:

"That Clauses 2, 3 and 4 stand part of the Bill."

The motion was adopted.

Clauses 2, 3 and 4 were added to the Bill.

Mr. DEPUTY SPEAKER.—Clause 1, The Title and the Preamble. The question is:

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri T. SUBRAMANYA.—Sir, I move:

"That the Bombay Local Boards (Mysore Amendment) Bill, 1959, be passed."

Mr. DEPUTY SPEAKER.—The question is:

"That the Bombay Local Boards (Mysore Amendment) Bill, 1959, be passed."

The motion was adopted.

Sri KADIDAL MANJAPPA (Minister for Revenue).—I am not moving the Land Acquisition (Mysore Extension and Amendment) Bill, 1959, since many members have told me that they have not received the copies of the Bill.

Some HON'BLE MEMBERS.—What is the result?

Sri KADIDAL MANJAPPA. The result is that it is postponed.